### ಬಂಧನ ನಿಯಮ ಸರಳಗೊಳಿಸಿದ್ದ 2018ರ ಆದೇಶ ಹಿಂದೆ ಪಡೆದ ಕೋರ್ಟ್

# ಪರಿಶಿಷ್ಟ ಕಾಯಿದೆಗೆ ಸುಪ್ರೀಂ ಬಲ

ವಿ.ಕ. 2-10-19

**ಹೊಸದಿಲ್ಲಿ:** ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ಕಾಯಿದೆಯಡಿ ಆರೋಪಕ್ಕೆ ಒಳಗಾದ ವ್ಯಕ್ತಿಯ ಬಂಧನಕ್ಕಿದ್ದ ನಿಯಮಗಳನ್ನು ಸರಳಗೊಳಿಸಿದ್ದ ತನ್ನದೇ ಆದೇಶವನ್ನು ಹಿಂಪಡೆಯುವ ಮೂಲಕ ಸುಪ್ರೀಂಕೋರ್ಟ್ ಗುರುವಾರ ಕಾಯಿದೆಗೆ ಮತ್ತೆ ಬಲ ತುಂಬಿದೆ.

''ಸಾಮಾಜಿಕ ಸಮಾನತೆಗಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರ ಹೋರಾಟ ಇನ್ನೂ ನಿಂತಿಲ್ಲ. ಅವರಿನ್ನೂ ಅಸ್ಪೃಶ್ಯತೆ, ಶೋಷಣೆ ಮತ್ತು ಸಾಮಾಜಿಕ ಬಹಿಷ್ಕಾರಗಳನ್ನು ಎದುರಿಸುತ್ತಿದ್ದಾರೆ. ಹೀಗಾಗಿ ದೌರ್ಜನ್ಯದ ವಿರುದ್ಧ ಕಠಿಣ ಕ್ರಮಗಳು ಇನ್ನೂ ಅಗತ್ಯವಿದೆ,'' ಎಂದು ನ್ಯಾಯಮೂರ್ತಿಗಳಾದ ಅರುಣ್ ಮಿಶ್ರಾ, ಎಂ.ಆರ್. ಶಾ ಮತ್ತು ಬಿ.ಆರ್. ಗವಾಯಿ ಅವರನ್ನೊಳಗೊಂಡ ನ್ಯಾಯಪೀಠ ಮಂಗಳವಾರ ಅಭಿಪ್ರಾಯಪಟ್ಟಿದೆ.

2018ರ ಮಾರ್ಚ್ 28ರಂದು ದ್ವಿಸದಸ್ಯ ಪೀಠವು ನೀಡಿದ್ದ ಆದೇಶಕ್ಕೆ ರಾಷ್ಟ್ರಾದ್ಯಂತ ಭಾರಿ ಆಕ್ಷೇಪ ವ್ಯಕ್ತವಾಗಿತ್ತು. ಪರಿಶಿಷ್ಟರ ಮೇಲೆ ದೌರ್ಜನ್ಯ ನಡೆದ ದೂರುಗಳು ಬಂದಾಗ ಆರೋಪಿಯನ್ನು ತಕ್ಷಣವೇ ಬಂಧಿಸಬಾರದು, ಡಿಎಸ್‌ಪಿ ರ‍್ಯಾಂಕ್‌ನ ಅಧಿಕಾರಿ ವಿಚಾರಣೆ ನಡೆಸಿದ ಬಳಿಕವೇ ಕ್ರಮ ಕೈಗೊಳ್ಳಬೇಕು ಎನ್ನುವುದು ತೀರ್ಪಿನ ಸಾರವಾಗಿತ್ತು. ಈ ಆದೇಶದ ಮೂಲಕ ಪರಿಶಿಷ್ಟ ಕಾಯಿದೆಯನ್ನು ದುರ್ಬಲಗೊಳಿಸಲಾಗಿದೆ ಎಂಬ ಆರೋಪ ಕೇಳಿಬಂದಿತ್ತು. ಕೇಂದ್ರ ಸರಕಾರ ಕೂಡಾ ಇದರ ವಿರುದ್ಧ ಆಕ್ಷೇಪವೆತ್ತಿತ್ತು. ಕೇಂದ್ರದ ಮನವಿಯನ್ನು ಪುರಸ್ಕರಿಸಿದ ಕೋರ್ಟ್, ಅದನ್ನು ತ್ರಿಸದಸ್ಯ ಪೀಠಕ್ಕೆ ಒಪ್ಪಿಸಿತ್ತು. ಕಳೆದ ಸೆಪ್ಟೆಂಬರ್ 13ರಂದು ತ್ರಿಸದಸ್ಯ ಪೀಠವು, ದ್ವಿಸದಸ್ಯ ಪೀಠದ ಆದೇಶಕ್ಕೆ ಆಕ್ಷೇಪವೆತ್ತಿತ್ತು. ಈಗ ಅಂತಿಮ ತೀರ್ಪು ನೀಡಲಾಗಿದೆ. ಇದರೊಂದಿಗೆ ಪರಿಶಿಷ್ಟ ಜಾತಿ/ಪಂಗಡಗಳ ಕಾಯಿದೆಯನ್ನು ದುರ್ಬಲಗೊಳಿಸಿದ ಆರೋಪದಿಂದ ಸುಪ್ರೀಂಕೋರ್ಟ್ ಮತ್ತು ಕೇಂದ್ರಗಳೆರಡೂ ಮುಕ್ತಿ ಪಡೆದಂತಾಗಿದೆ.



### ಸುಪ್ರೀಂಕೋರ್ಟ್ ಹೇಳಿದ್ದೇನು?

- 15ನೇ ವಿಧಿಯಡಿ ಸಂವಿಧಾನವು ಪರಿಶಿಷ್ಟರಿಗೆ ರಕ್ಷಣೆ ನೀಡುತ್ತದೆಯಾದರೂ ಅವರಿನ್ನೂ ಸಾಮಾಜಿಕ ಶೋಷಣೆ ಮತ್ತು ತಾರತಮ್ಯಕ್ಕೆ ಒಳಗಾಗುತ್ತಲೇ ಇದ್ದಾರೆ.
- ಎಸ್‌ಸಿ/ಎಸ್‌ಟಿ ಕಾಯಿದೆಯ ಅವಕಾಶಗಳನ್ನು ದುರುಪಯೋಗ ಮಾಡಿಕೊಳ್ಳಲಾಗುತ್ತಿರುವುದಕ್ಕೆ ಕಾರಣ ಜಾತಿ ವ್ಯವಸ್ಥೆಯಲ್ಲ, ಇದು ಮಾನವ ವೈಫಲ್ಯ.
- ಯಾವುದೇ ಪ್ರಕರಣ ದಾಖಲಿಸಿಕೊಂಡು ಬಂಧಿಸುವ ಮುನ್ನ ಉನ್ನತಾಧಿಕಾರಿ ವಿಚಾರಣೆ ನಡೆಸಬೇಕು ಎಂಬ ಆದೇಶ ಸರಿಯಾದುದಲ್ಲ. ಕೋರ್ಟ್ ಹಾಗೆ ಮಾಡಬಾರದಿತ್ತು. ಸಂವಿಧಾನದಡಿ ಇದಕ್ಕೆ ಅವಕಾಶವಿಲ್ಲ.

### ಜಾತಿ ಆಧಾರದಲ್ಲಿ ಸಂಶಯಿಸಬೇಡಿ

ಪರಿಶಿಷ್ಟ ವ್ಯಕ್ತಿ ನೀಡಿದ ದೂರಿನ ಆಧಾರದಲ್ಲಿ ಕ್ರಮ ಕೈಗೊಳ್ಳಬೇಕಾದರೆ ಉನ್ನತಾಧಿಕಾರಿ ತನಿಖೆ ನಡೆಸಬೇಕೆಂಬ ದ್ವಿಸದಸ್ಯ ಪೀಠದ ತೀರ್ಪನ್ನು ತ್ರಿಸದಸ್ಯ ಪೀಠ ತೀವ್ರವಾಗಿ ಆಕ್ಷೇಪಿಸಿದೆ. ''ಒಬ್ಬ ಜನರಲ್ ಕೆಟಗರಿ ವ್ಯಕ್ತಿ ಬಂದು ಯಾರಾದರೊಬ್ಬರ ಮೇಲೆ ದೂರು ಸಲ್ಲಿಸಿದಾಗಲೂ ನೀವು ಇದೇ ರೀತಿ ಮಾಡುತ್ತೀರಾ? ಜನರಲ್ ಕೆಟಗರಿ ವ್ಯಕ್ತಿಗಳು ಸುಳ್ಳು ಕೇಸು ದಾಖಲಿಸಬಾರದು ಎಂದಿದೆಯಾ? ಒಬ್ಬ ವ್ಯಕ್ತಿಯ ಜಾತಿಯನ್ನು ಆಧರಿಸಿ ಹೇಗೆ ಆದೇಶಗಳನ್ನು ಕೊಡುತ್ತೀರಿ? ಇಂದು ಸಂವಿಧಾನ ವಿರೋಧಿ,'' ಎಂದು ಪೀಠ ಹೇಳಿತು.

### 2018ರ ತೀರ್ಪು ಏನಿತ್ತು?

ದೇಶದಲ್ಲಿ ಪರಿಶಿಷ್ಟ ಕಾಯಿದೆಯ ದುರುಪಯೋಗವಾಗುತ್ತಿದೆ, ಅಮಾಯಕರ ಮೇಲೆ ಕೇಸು ಹಾಕಿ ಬಂಧಿಸಲಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್ ಈ ಆದೇಶವನ್ನು ನೀಡಿತ್ತು. ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮೇಲಿನ ದೌರ್ಜನ್ಯ ತಡೆ ಕಾಯಿದೆಯಡಿ ದೂರುಗಳು ಬಂದಾಗ ತಕ್ಷಣವೇ ಬಂಧಿಸಬೇಕೆಂಬ ಅವಕಾಶ ಸರಿಯಲ್ಲ. ಒಬ್ಬ ಡಿಎಸ್‌ಪಿ ಹಂತದ ಅಧಿಕಾರಿ ಪರಿಶೀಲಿಸಿ ಬಂಧನಕ್ಕೆ ಆದೇಶ ನೀಡಬಹುದು ಎಂದು ಹೇಳಿತ್ತು.

- ಆರೋಪಿತ ವ್ಯಕ್ತಿಗೆ ನಿರೀಕ್ಷಣಾ ಜಾಮೀನು ಪಡೆಯುವ ಅವಕಾಶ ನಿರಾಕರಣೆ ತಪ್ಪು ಎಂದಿತ್ತು.
- ಸರಕಾರಿ ಅಧಿಕಾರಿಗಳ ವಿರುದ್ಧ ದೂರು ಬಂದಾಗ ಬಂಧನಕ್ಕೆ ಹಿರಿಯ ಅಧಿಕಾರಿಗಳ ಅನುಮೋದನೆ ಪಡೆಯಲು ಸೂಚಿಸಿತ್ತು.